ದಿನಾಂಕಃ 30-06-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ-

ನಿಪಿ1 ರಲ್ಲಿ ಹೇಳಿರುವ ಕಾನೇಶುಮಾರಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ನಾನು ಅವುಗಳನ್ನು ಕೋರ್ಟಿಗೆ ಕೊಟ್ಟಿರುವುದಿಲ್ಲ. ಸಾಕ್ಷಿ ದಾಖಲೆಗಳನ್ನು ಪಡೆದುಕೊಂಡು ಹಾಜರು ಮಾಡುತ್ತೇನೆನ್ನುತ್ತಾರೆ. ತಹಶೀಲ್ದಾರ್ ರವರು ನೀಡುತ್ತಿದ್ದ ಕಾನೇಶುಮಾರಿ ದಾಖಲೆಗಳಲ್ಲಿ ಅಸ್ತಿಯ ವಿಸ್ತೀರ್ಣ ಉಲ್ಲೇಖ ಮಾಡುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಇದ್ದಿರಬಹುದು ಅನ್ನುತ್ತಾರೆ. ನಿಪಿ1 ರಲ್ಲಿ ಕಾನೇಶುಮಾರಿ ನಂಃ 219, 235, 236, 237 ಉಲ್ಲೇಖ ಇರುತ್ತವೆಂದರೆ ಸರಿ. ಕಾನೇಶುಮಾರಿ ನಂಃ 219 ರಸ್ತೆ ದಕ್ಷಿಣಕ್ಕೆ ಇರುತ್ತದೆಂದರೆ ನಾನು ನೋಡಿಲ್ಲ. ನಿಪಿ1 ರಲ್ಲಿ ಸದರಿ ಆಸ್ತಿಯನ್ನು ಹೆಚ್ ಎಂ ಮಲ್ಲಿಕಾರ್ಜುನಪ್ಪ ನವರ ಹಿಸ್ಸೆಗೆ ಬಿಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ಕಾನೇಶುಮಾರಿ ನಂಃ 235, 236 ಚಂದ್ರಶೇಖರಪ್ಪನವರ ಹಿಸ್ಸೆಗೆ ತೋರಿಸಲಾಗಿದೆ ಎಂದರೆ ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ಅದೇ ರೀತಿ ಕಾನೇಶುಮಾರಿ ನಂಃ 237 ಹೆಚ್ ಎಂ ರುದ್ರಪ್ಪನವರಿಗೆ ಬಿಡಲಾಗಿದೆ ಎಂದರೆ ಸಾಕ್ಷಿ ದಾಖಲೆ ನೋಡಬೇಕೆನ್ನುತ್ತಾರೆ. ಮಲ್ಲಿಕಾರ್ಜುನಪ್ಪನವರಿಗೆ ಕೊಟ್ಟ 219 ನ್ನು ಅವರ ಸಹೋದರರಾದ ಹೆಚ್ ಎಂ ಚಂದ್ರಶೇಖರಪ್ಪ ನವರ ಅನುಭವದಲ್ಲಿ ಇರುತ್ತದೆಂದರೆ ಸರಿಯಲ್ಲ. ಆದ್ದರಿಂದ ಪಂಚಾಯ್ತಿ ದಾಖಲೆಗಳಲ್ಲೂ ಕೂಡಾ ಚಂದ್ರಶೇಖರಪ್ಪನವರ ಹೆಸರೇ ಇರುತ್ತದೆಂದರೆ ಸರಿಯಲ್ಲ.

ವಿಭಾಗ ಆದ ನಂತರವೂ ಕೂಡಾ ಈ ನಾಲ್ಕು ಆಸ್ತಿಗಳು ಮತ್ತು ದಾವಾಆಸ್ತಿ ರುದ್ರಪ್ಪನವರ ಹೆಸರಿನಲ್ಲಿ ಮುಂದುವರೆಯಿತು ಎಂದರೆ ಸರಿಯಲ್ಲ. ಸಾಕ್ಷಿ ನನಗೆ ಗೊತ್ತಿಲ್ಲ ಅನ್ನುತ್ತಾರೆ. ತಂದೆ ಹಾಗೂ ಅವರ ಸಹೋದರರು ಮೊದಲಿನಿಂದಲೂ ಅನ್ಯೋನ್ಯವಾಗಿದ್ದರು ಎಂದರೆ ಸರಿ. ಭವಿಷ್ಯದಲ್ಲಿ ತೊಂದರೆಯಾಗಬಾರದೆಂದು ನಿಪಿ1 ನ್ನು ಮಾಡಿಕೊಳ್ಳಲಾಗಿತ್ತು ಎಂದರೆ ಇರಬಹುದು. ನಿಪಿ1 ರ ಪ್ರಕಾರ ನಮ್ಮ ತಂದೆ ಅಥವಾ ಮಲ್ಲಿಕಾರ್ಜುನಪ್ಪನವರಿಗೆ ಅವರ ಹಿಸ್ಸೆಗೆ ಬಂದ ಮೇಲೆ ಹೇಳಿದ ಕಾನೇಶುಮಾರಿ ನಂಬರ್ ಗಳ ಆಸ್ತಿಗಳ ಸ್ವಾದೀನತೆಯನ್ನು ಪಡೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ. ಚಂದ್ರಶೇಖರಪ್ಪ ಹಾಗೂ ರುದ್ರಪ್ಪನವರು ಅವರಿಗೆ ಬಂದ ಆಸ್ತಿಗಳನ್ನು ಅನುಭವಿಸುತ್ತಿದ್ದರೆಂದರೆ ಸರಿ. ಚಂದ್ರಶೇಖರಪ್ಪನವರು ಅವರ

ಹಿಸ್ಸೆಗೆ ಬಂದ ಕಾನೇಶುಮಾರಿ ಆಸ್ತಿಗಳ ಜೊತೆ ನಮ್ಮ ತಂದೆಗೆ ಬಂದ ಆಸ್ತಿಗಳು ಹಾಗೂ ಮಲ್ಲಿಕಾರ್ಜುನಪ್ಪನವರಿಗೆ ಬಂದ ಕಾನೇಶುಮಾರಿ ನಂಬರ್ ಗಳನ್ನೂ ಸಹ ಅನುಭವಿಸುತ್ತಿದ್ದರೆಂದರೆ ಸರಿಯಲ್ಲ. ಆ ನಂತರ ಪಂಚಾಯ್ತಿ ದಾಖಲೆಗಳು ಚಂದ್ರಶೇಖರಪ್ಪನವರ ಹೆಸರಿಗೆ ಬದಲಾದವು ಎಂದರೆ ಸರಿ. ಸಾಕ್ಷಿ 1986 ರವರೆಗೂ ನಮ್ಮ ತಂದೆ ಹೆಸರಿನಲ್ಲಿದ್ದು, ಕಂದಾಯ ಕಟ್ಟುತ್ತಿದ್ದೆವು ಅನ್ನುತ್ತಾರೆ. ನಮ್ಮ ತಂದೆ ಕಂದಾಯ ಕಟ್ಟುತ್ತಿದ್ದರು ಹಾಗೂ 1986 ರವರೆಗೂ ನಮ್ಮ ತಂದೆಯ ಹೆಸರಿನಲ್ಲೇ ಇತ್ತು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆ ಕೂಡಾ ನಮ್ಮ ದೊಡ್ಡಪ್ಪ ಚಂದ್ರಶೇಖರಪ್ಪ ನವರು ಸ್ವಾದೀನತೆಯಲ್ಲಿ ಇದ್ದ ವಿಚಾರ ಗೊತ್ತಿದ್ದರಿಂದ ಅದನ್ನು ಪ್ರಶ್ನೆ ಮಾಡಲಿಲ್ಲ ಎಂದರೆ ಸರಿಯಲ್ಲ. ಅವರಿಗೆ ಬಂದ ಕಾನೇಶುಮಾರಿ ಅವರ ಹೆಸರಿಗೆ ಖಾತೆ ಮಾಡಿಸಲು ಪ್ರಯತ್ನ ಮಾಡಿರಬಹುದು ನನಗೆ ಗೊತ್ತಿಲ್ಲ. ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಆಸ್ತಿಯ ಪೂರ್ವಕ್ಕೆ ಕರಿವೀರಪ್ಪನವರ ಆಸ್ತಿಯ ನಂತರ ಚಂದ್ರಶೇಖರಪ್ಪನವರು ಹಾಗೂ ರುದ್ರಪ್ಪನವರು ಇದ್ದಾರೆಂದರೆ ಸರಿ. ಸಾಕ್ಷಿ ಯಾವ ನಂಬರ್ ಅಂತ ಗೊತ್ತಿಲ್ಲ ಅನ್ನುತ್ತಾರೆ. ರುದ್ರಪ್ಪನವರು ಇದ್ದ ಮನೆ ಹಳೆಯ ಮನೆಯಾಗಿದೆ.

(3 ರಿಂದ 5 ನೇ ಪ್ರತಿವಾದಿಗಳು ಸಮಯ ಕೋರಿದ್ದು, ಸಕಾರಣವಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಅಂತ ತೆಗೆದುಕೊಳ್ಳಲಾಯ್ತು)

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.